# ಕರ್ನಾಟಕ ಸರ್ಕಾರ

ಸಂಖ್ಯೆ:ಕಾಶಿಇ/200/ವಿ.ಚೇ.ವಿ.ವೇ-ಭಾಸ/2016-17/ವಿವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:29-08-2016

## ಸುತ್ತೋಲೆ

**ವಿಷಯ:** ಭಾರತ ಸರ್ಕಾರದ ವಿಕಲಚೇತನ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಯೋಜನೆಯನ್ನು ಅನುಷ್ಠಾನಗೊಳಸಲು ಕ್ರಮ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಆಯುಕ್ತರ ಕಛೇರಿ, ಕರ್ನಾಟಕ, ಬೆಂಗಳೂರು, ಇವರ ಕಛೇರಿ ಪತ್ರ ಸಂಖ್ಯೆ:ಅಂಅನಿ/ವಿ.ಚೇ.ವಿ.ವೇ-ಭಾಸ/2016-17/756 ದಿ:25-08-2016

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ ಭಾರತ ಸರ್ಕಾರದ ವಿಕಲಚೇತನ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಮೆಟ್ರಿಕೋತ್ತರ ವಿದ್ಯಾರ್ಥಿವೇತನ/ ಉನ್ನತ ಶ್ರೇಣಿಯ ಶಿಕ್ಷಣಕ್ಕೆ ವಿದ್ಯಾರ್ಥಿವೇತನಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು **<u>ಆಗಸ್ಟ್ 31, 2016</u>** ಕೊನೆಯ ದಿನಾಂಕವಾಗಿದ್ದು, ಅರ್ಹ ವಿದ್ಯಾರ್ಥಿಗಳು www.scholarships.gov.in ನಲ್ಲಿ ನೋಡಬಹುದಾಗಿದೆ. ಅಥವಾ www.disabilityaffairs.gov.in ನಿಂದ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ: 080-223462625, 23462641ಕ್ಕೆ ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ. ಮೇಲಿನ ವಿದ್ಯಾರ್ಥಿವೇತನ ಯೋಜನೆಗಳು 40% ಅಂಗವೈಕಲ್ಯ ಹೊಂದಿರುವ ಹಾಗೂ ಈ ಸಂಬಂಧವಾಗಿ ಯೋಗ್ಯ ವೈದ್ಯಕೀಯ ಪ್ರಾಧಿಕಾರವು ವಿತರಿಸಿರುವ ವಿಕಲಚೇತನ ಪ್ರಮಾಣ ಪತ್ರ ಹೊಂದಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸಲಿದ್ದು, ಸದರಿ ಮಾಹಿತಿಯನ್ನು ಎಲ್ಲಾ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳ ಸೂಚನಾ ಫಲಕದಲ್ಲಿ ಅಳವಡಿಸಿ ಹಾಗೂ ತರಗತಿಗಳಿಗೆ ತೆರಳಿ ಅರ್ಹ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ, ಸದರಿ ವಿದ್ಯಾರ್ಥಿವೇತನವನ್ನು ದೊರಕಿಸಿಕೊಡಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಅಡಕ: ಉಲ್ಲೇಖಿತ ಪತ್ರ ಹಾಗೂ ಲಗತ್ತುಗಳು

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

**ಇವರಿಗೆ:**

ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ವೆಬ್‌ಸೈಟ್ ಮುಖಾಂತರ

**ಪ್ರತಿ ರವಾನೆ:**

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಕಲಬುರಗಿ ತಮ್ಮ ಕಛೇರಿ ವ್ಯಾಪ್ತಿಯ ಎಲ್ಲಾ ಕಾಲೇಜುಗಳಿಗೆ ತುರ್ತಾಗಿ ಸದರಿ ಮಾಹಿತಿಯನ್ನು ರವಾನಿಸಿ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಸದರಿ ವಿದ್ಯಾರ್ಥಿವೇತನವನ್ನು ದೊರಕಿಸಿಕೊಡಲು ಕ್ರಮ ವಹಿಸುವುದು.
2. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು
3. ಕಛೇರಿ ಪ್ರತಿ.

200, Physical Handicaft (Sch)

Speed post

ಕರ್ನಾಟಕ ಸರ್ಕಾರ

# ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಆಯುಕ್ತರ ಕಛೇರಿ - ಕರ್ನಾಟಕ

(ಕೇಂದ್ರದ ಅಧಿನಿಯಮದಡಿ ಸ್ಥಾಪಿಸಲಾಗಿದೆ)

**ಗೋವಿಂದರಾಜು**
ರಾಜ್ಯ ಆಯುಕ್ತರು

ನಂ. 55, 2ನೇ ಮಹಡಿ, "ಅಭಯ ಸಂಕೀರ್ಣ"
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ
ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020
ದೂರವಾಣಿ ಸಂಖ್ಯೆ : 080-23462625, 23462641
ಇ-ಮೇಲ್ : scdkarnataka@gmail.com
ಅಂತರ್ಜಾಲ : scd.kar.nic.in

---

ಸಂಖ್ಯೆ: ಅಂಅನಿ/ವಿ.ಚೇ.ವಿ.ವೇ-ಭಾ.ಸ/2016-17 756 ದಿನಾಂಕ: 25/08/2016

ಕಾಲೇಜು ಶಿಕ್ಷಣ ನಿರ್ದೇಶಕರ ಕಛೇರಿ
ಕ್ರಮ ಸಂಖ್ಯೆ: 135
ದಿನಾಂಕ: 29/8/16

ಮಾನ್ಯರೆ,

ವಿಷಯ: ಭಾರತ ಸರ್ಕಾರದ ವಿಕಲಚೇತನ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಪ್ರಜಾವಾಣಿ ದಿನಪತ್ರಿಕೆ ದಿನಾಂಕ: 17/08/2016ರ ಪುಟ ಸಂಖ್ಯೆ:3ಬಿ ಯಲ್ಲಿ ನೀಡಿದ ಜಾಹೀರಾತು.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಕಲಚೇತನ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ ಭಾರತ ಸರ್ಕಾರವು ವಿದ್ಯಾರ್ಥಿವೇತನ ಯೋಜನೆಯನ್ನು ಜಾರಿಗೆ ತಂದಿರುವ ಬಗ್ಗೆ ಉಲ್ಲೇಖದಂತೆ ಪ್ರಕಟಿಸಿರುವ ಜಾಹೀರಾತನ್ನು ತಾವು ಗಮನಿಸಿರುತ್ತೀರೆಂದು ಭಾವಿಸಿದ್ದೇನೆ. ಕಳೆದ ಕೆಲವು ವರ್ಷಗಳ ನನ್ನ ಅನುಭವದಲ್ಲಿ ಕರ್ನಾಟಕ ರಾಜ್ಯದಲ್ಲಿ ಭಾರತ ಸರ್ಕಾರದ ವಿಕಲಚೇತನ ವಿದ್ಯಾರ್ಥಿವೇತನವನ್ನು ಪಡೆಯುವಲ್ಲಿ ಆಸಕ್ತಿ ವಹಿಸಿರುವುದು ಬಹಳ ಕಡಿಮೆ. ಇದಕ್ಕೆ ಬಹುಶ: ವ್ಯಾಪಕ ಪ್ರಚಾರದ ಕೊರತೆ ಇರಬಹುದು.

ಉಲ್ಲೇಖಿತ ಪತ್ರಿಕಾ ಪ್ರಕಟಣೆಯನ್ನು ಇದರೊಂದಿಗೆ ಲಗತ್ತಿಸುತ್ತಾ, ಪ್ರಕಟಣೆಯಲ್ಲಿ ತಿಳಿಸಿರುವ ಕಾಲಮಿತಿಯೊಳಗೆ ಎಲ್ಲಾ ಅರ್ಹ ವಿಕಲಚೇತನ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ನಿಮ್ಮ ವ್ಯಾಪ್ತಿಯ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಮಾಹಿತಿ ನೀಡಲು ಮತ್ತು ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ನೀಡಲು ಕೋರಿದೆ.

ವಂದನೆಗಳೊಂದಿಗೆ

29-8-16

29/8/16

ತಮ್ಮ ವಿಶ್ವಾಸಿ,

ಪ್ರೊ. ಹೆಚ್.ಕುಸುಮ
ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
2ನೇ ಮಹಡಿ, ತಾಂತ್ರಿಕ ಶಿಕ್ಷಣ ಇಲಾಖೆ ಕಟ್ಟಡ,
ಅರಮನೆ ರಸ್ತೆ, ಬೆಂಗಳೂರು-560001.



ಶ್ರೀ ನರೇಂದ್ರ ಮೋದಿ
ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿ



Accessible India Campaign
Accessible India - Empowered India
Department of Empowerment of Persons with Disabilities (Divyangjan)
Ministry of Social Justice & Empowerment

Department of Empowerment of Persons with Disabilities (Divyangjan)
Ministry of Social Justice & Empowerment

# ವಿದ್ಯಾರ್ಥಿವೇತನಗಳು
## ವಿಕಲಚೇತನ ವಿದ್ಯಾರ್ಥಿಗಳಿಗೆ

ವಿಕಲಚೇತನ ವಿದ್ಯಾರ್ಥಿಗಳಿಗಾಗಿ ಶಿಕ್ಷಣದ ಅವಕಾಶಗಳನ್ನು ಒದಗಿಸುವ ಸಲುವಾಗಿ ವಿಕಲಚೇತನ ವ್ಯಕ್ತಿಗಳ ಸಬಲೀಕರಣ ಇಲಾಖೆಯು ಶಿಕ್ಷಣದ ಮೂಲಕ ಅವರ ಸಬಲೀಕರಣಕ್ಕಾಗಿ ಈ ಕೆಳಗಿನ ವಿದ್ಯಾರ್ಥಿವೇತನ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದೆ:

"ಆಜಾದಿ 70 ಸಾಲ್– ಯಾದ್ ಕರೊ ಕುರುಬಾನಿ"

| ಕ್ರ ಸಂ | ಯೋಜನೆ | ಇವುಗಳಿಗೆ ಕೋರ್ಸ್‌ಗಳು | ಒಂದು ವರ್ಷಕ್ಕೆ ವಿದ್ಯಾರ್ಥಿವೇತನದ ಸಂಖ್ಯೆ | ವಾರ್ಷಿಕ ಆದಾಯದ ಗರಿಷ್ಠ ಮಿತಿ (ರೂ) | ವಿದ್ಯಾರ್ಥಿವೇತನದ ದರ | ಹೇಗೆ ಸಲ್ಲಿಸಬೇಕು |
|---|---|---|---|---|---|---|
| 1. | 1.ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ | ಕ್ಲಾಸ್ IX ಹಾಗೂ X | 46,000 | 2.00 ಲಕ್ಷ | ದಿನದ ಸ್ಕಾಲರ್‌ಗಳಿಗೆ ತಿಂಗಳ ನಿರ್ವಹಣಾ ಭತ್ಯೆ ರೂ. 350 ಹಾಗು ಹಾಸ್ಟೆಲ್‌ನಲ್ಲಿರುವವರಿಗೆ ರೂ. 600 ಜೊತೆಗೆ ಪುಸ್ತಕದ ಅನುದಾನ ಹಾಗು ಸಾರಿಗೆ ಭತ್ಯೆ, ರೀಡರ್ ಭತ್ಯೆ ಇತ್ಯಾದಿ ಇತರ ಭತ್ಯೆಗಳು | ವಿದ್ಯಾರ್ಥಿಗಳು ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ www.scholarships.gov.in ನಲ್ಲಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ ಆಗಸ್ಟ್ 31, 2016 |
| 2. | ಮೆಟ್ರಿಕೋತ್ತರ ವಿದ್ಯಾರ್ಥಿವೇತನ | ಕ್ಲಾಸ್ XI ರಿಂದ ಸ್ನಾತಕೋತ್ತರ ಅಥವಾ ಡಿಪ್ಲಮಾ ಶ್ರೇಣಿ | 16,650 | 2.50 ಲಕ್ಷ | ಬೇರೆ ಬೇರೆ ಶಿಸ್ತುಗಳಲ್ಲಿನ ಸ್ನಾತಕೋತ್ತರ, ಪದವಿಯಲ್ಲದ ಡಿಪ್ಲಮಾ, ಪದವಿಗೆ ಕರೆದೊಯ್ಯುವ ವೃತ್ತಿಪರ ಕೋರ್ಸ್‌ಗಳು, ಡಿಪ್ಲೊಮಾ ಇತ್ಯಾದಿಗಳಿಗೆ ಬೇರೆ ದರಗಳು. ಹಾಸ್ಟೆಲ್‌ನಲ್ಲಿರುವವರಿಗೆ ರೂ. 380-1200 ಹಾಗು ದಿನದ ಸ್ಕಾಲರ್‌ಗಳಿಗೆ ರೂ. 230-550 ವರೆಗೆ ಇದರ ಜೊತೆಗೆ ಟ್ಯೂಷನ್ ಶುಲ್ಕ, ಭತ್ಯೆಗಳು, ಪುಸ್ತಕದ ಅನುದಾನ ಇತ್ಯಾದಿ. | |
| 3. | ಉನ್ನತ ಶ್ರೇಣಿಯ ಶಿಕ್ಷಣಕ್ಕೆ ವಿದ್ಯಾರ್ಥಿವೇತನ | ಸ್ನಾತಕೋತ್ತರ ಪದವಿ ಅಥವಾ ಅತ್ಯುತ್ತಮ ಶ್ರೇಣಿ ಅಧಿಸೂಚಿತ 197 ಸಂಸ್ಥೆಗಳಲ್ಲಿ ಡಿಪ್ಲಮಾ | 160 | 6.00 ಲಕ್ಷ | ಹಾಸ್ಟೆಲ್‌ನಲ್ಲಿರುವವರಿಗೆ ತಿಂಗಳ ನಿರ್ವಹಣಾ ರೂ. 3000/-, ದಿನದ ಸ್ಕಾಲರ್‌ಗಳಿಗೆ, ರೂ. 2000/- ವಿಕಲಚೇತನ ಭತ್ಯೆ, ವರ್ಷಕ್ಕೆ ರೂ. 5000/- ಪುಸ್ತಕ ಅನುದಾನ, ಟ್ಯೂಷನ್ ಶುಲ್ಕ ವರ್ಷಕ್ಕೆ ರೂ. 2 ಲಕ್ಷದವರೆಗೆ | |
| 4. | ವಿಕಲಚೇತನ ವ್ಯಕ್ತಿಗಳಿಗೆ ರಾಷ್ಟ್ರೀಯ ಫೆಲೋಶಿಪ್ | ಎಂ.ಫಿಲ್/ಪಿಎಚ್.ಡಿ | 200 | ಆದಾಯಕ್ಕೆ ಗರಿಷ್ಠ ಮಿತಿ ಇಲ್ಲ | ಜೆಆರ್‌ಎಫ್ (ಮೊದಲ ಎರಡು ವರ್ಷಗಳಿಗೆ) ತಿಂಗಳಿಗೆ ರೂ. 25,000/- ಹಾಗು ಎಸ್‌ಆರ್‌ಎಫ್ ( ಮೂರನೇ ವರ್ಷದಿಂದ ಕೋರ್ಸ್ ಮುಗಿಯುವವರೆಗೆ) ರೂ. 28,000/- ಹಾಗೂ ಆಕಸ್ಮಿಕ ಭತ್ಯೆ, ಬೆಂಗಾವಲು ಭತ್ಯೆ/ ರೀಡರ್ ಭತ್ಯೆ, ಎಚ್‌ಆರ್‌ಎ ಇತ್ಯಾದಿ | ವಿದ್ಯಾರ್ಥಿಗಳು ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ವೆಬ್‌ಸೈಟ್ www.ugc.ac.in ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ಯುಜಿಸಿ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ 15 ಆಗಸ್ಟ್ 2016. ವಿದ್ಯಾರ್ಥಿಗಳ ಆಯ್ಕೆಯನ್ನು ಯುಜಿಸಿ ಮಾಡುತ್ತದೆ. |
| 5. | ಮುಂದುವರೆಸುವವರಿಗೆ ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿವೇತನಗಳು | ಹೊರದೇಶದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಹಾಗು ಡಾಕ್ಟೊರಲ್ ಪದವಿಗಳು | 20 | 6.00 ಲಕ್ಷ | ಪೌಂಡ್ ( ಗ್ರೇಟ್ ಬ್ರಿಟನ್) 9,900 ಯುಕೆಗೆ ಪ್ರತಿ ವರ್ಷಕ್ಕೆ ಹಾಗೂ ಯುಎಸ್ $ 15,400 ಇತರ ರಾಷ್ಟ್ರಗಳಿಗೆ ಇದರ ಜೊತೆಗೆ ಟ್ಯೂಷನ್ ಶುಲ್ಕ, ಆಕಸ್ಮಿಕ ಭತ್ಯೆ, ಏರ್ ಪ್ಯಾಸೇಜ್ ಬೆಲೆ ಇತ್ಯಾದಿ | ಅರ್ಜಿಗಳ ಆಹ್ವಾನವನ್ನು ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ 12 ಜುಲೈ 2016 ರಂದು ಪ್ರಕಟಿಸಲಾಗಿದೆ ಹಾಗು ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ 25 ಆಗಸ್ಟ್ 2016. ಅಭ್ಯರ್ಥಿಗಳ ಆಯ್ಕೆಯನ್ನು ಡಿಇಪಿಡಬ್ಲ್ಯುಡಿ ಮಾಡುತ್ತದೆ. |

ಮೇಲಿನ ಎಲ್ಲ ವಿದ್ಯಾರ್ಥಿವೇತನ ಯೋಜನೆಗಳು 40% ಅಂಗವೈಕಲ್ಯ ಹೊಂದಿರುವ ಹಾಗು ಈ ಸಂಬಂಧವಾಗಿ ಯೋಗ್ಯ ವೈದ್ಯಕೀಯ ಪ್ರಾಧಿಕಾರವು ವಿತರಿಸಿರುವ ವಿಕಲಚೇತನ ಪ್ರಮಾಣ ಪತ್ರ ಹೊಂದಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ. ವಿದ್ಯಾರ್ಥಿವೇತನ ಯೋಜನೆಗಳ ವಿವರಗಳಿಗೆ www.disabilityaffairs.gov.in ಗೆ ಭೇಟಿ ನೀಡಿ.

**ಸಾಮಾಜಿಕ ನ್ಯಾಯ ಹಾಗು ಸಬಲೀಕರಣ ಸಚಿವಾಲಯ**
**ವಿಕಲಚೇತನ ವ್ಯಕ್ತಿಗಳ (ದಿವ್ಯಾಂಜನ)**

7/13/0038/1617